**(ವಂದೇ ಮಾತರಂ ಗೀತೆ ಗಾಯನದ ನಂತರ ಸಭಾಪತಿಗಳಾದ**

**ಶ್ರೀ ಡಿ. ಹೆಚ್. ಶಂಕರಮೂರ್ತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ನೂರ ಹದಿನೈದನೆಯ ಅಧಿವೇಶನಕ್ಕೆ ತಮ್ಮೆಲ್ಲರನ್ನು ಸ್ವಾಗತಿಸುತ್ತೇನೆ.

**1. ಪ್ರಕಟಣೆ**

**ಪರಿಸರ ಸ್ನೇಹಿ ವಾಹನ ವ್ಯವಸ್ಥೆ ಕುರಿತು-**

**ಸಭಾಪತಿಯವರು:-** ವಿಧಾನ ಪರಿಷತ್ತಿನ ಅಧಿವೇಶನದ ಸಮಯದಲ್ಲಿ ಮಾನ್ಯ ಸದಸ್ಯರುಗಳು ಅಧಿವೇಶನಕ್ಕೆ ಶಾಸಕರ ಭವನದಿಂದ ವಿಧಾನಸೌಧಕ್ಕೆ ಮತ್ತು ವಿಧಾನಸೌಧದಿಂದ ಶಾಸಕರ ಭವನಕ್ಕೆ ಹೋಗಿ ಬರಲು ಪ್ರತಿದಿನ ಅಧಿವೇಶನ ಪ್ರಾರಂಭವಾಗುವ ಮೊದಲು ಒಂದು ಗಂಟೆ ಮುಂಚಿತವಾಗಿ ಮತ್ತು ಅಧಿವೇಶನ ಮುಕ್ತಾಯಗೊಂಡ ನಂತರ ಒಂದು ಗಂಟೆಯವರೆಗೆ ಬ್ಯಾಟರಿ ಚಾಲಿತ (ಪರಿಸರ ಸ್ನೇಹಿ) ವಾಹನಗಳ ವ್ಯವಸ್ಥೆ ಮಾಡಲಾಗಿರುತ್ತದೆ. ಭೋಜನ ವಿರಾಮದ ಸಂದರ್ಭದಲ್ಲಿಯೂ ಸಹ ಈ ವ್ಯವಸ್ಥೆ ಇರುತ್ತದೆ. ಈ ವ್ಯವಸ್ಥೆಯ ಉಪಯೋಗವನ್ನು ಮಾನ್ಯ ಸದಸ್ಯರುಗಳು ಪಡೆದುಕೊಳ್ಳಬೇಕೆಂದು ಈ ಮೂಲಕ ಕೋರುತ್ತೇನೆ.

**ಶ್ರೀ ಮನೋಹರ್ ಮಸ್ಕಿ:-**ಮಾನ್ಯ ಸಭಾಪತಿಯವರೇ, ಬಹುಶಃ ತಾವು ಒಂದು ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿರುತ್ತೀರಿ. ಇದು ಅನೇಕ ಶಾಸಕರ ಮನದಾಳದ ಬೇಡಿಕೆ ಎನ್ನುವುದಕ್ಕಿಂತಲೂ ನನ್ನ ಮನದಾಳದ ಬಯಕೆಯಾಗಿತ್ತು. ಇವತ್ತು ತಾವು ಅದನ್ನು ಈಡೇರಿಸಿದ್ದೀರಿ. ನನಗೆ ನೆನಪಿರುವಂತೆ ಮೂರು ತಿಂಗಳ ಹಿಂದೆ ಇದರ ಬಗ್ಗೆ ಸಾಂದರ್ಭಿಕವಾಗಿ ಪ್ರಸ್ತಾಪವನ್ನು ಸದನದಲ್ಲಿ ಮಾಡಿದ್ದೆ. ಇದನ್ನು ಮೂರು ತಿಂಗಳಿನಲ್ಲಿ ನೇರವೇರಿಸಿದ್ದೀರಿ. ಆದ್ದರಿಂದ ತಮ್ಮ ಕಾರ್ಯಕ್ಷಮತೆಗೆ ಮತ್ತು ವಿಶೇಷವಾಗಿ

ಪರಿಸರ ಕಾಳಜಿಗೆ, ಇವತ್ತು ವಿಧಾನಸೌಧ ಕೂಡ ಒಳ್ಳೆಯ ವಾಸ್ತು ಶಿಲ್ಪ ಇರುವಂತಹ, ಪರಂಪರೆ ಇರುವಂತಹ ಒಂದು ಕಟ್ಟಡ. ಇಲ್ಲಿ ಬೇರೆ ವಾಹನಗಳನ್ನು ಬಳಸುವುದಕ್ಕಿಂತ ಬ್ಯಾಟರಿ ಚಾಲಿತ ವಾಹನ ಇರುವುದು ಉತ್ತಮ ಎನ್ನುವುದು ಕೂಡ ಒಳ್ಳೆಯದು. ಹಾಗೆಯೇ ಇನ್ನೊಂದು ವಿನಂತಿ ಕೂಡ ತಮ್ಮಲ್ಲಿ ಏನೆಂದರೆ, ವಿಶೇಷವಾಗಿ ಕೆಲವು ಶಾಸಕರು ತಮ್ಮ ವಾಹನವನ್ನು ಸ್ವಂತ ಚಾಲನೆ ಮಾಡಿಕೊಂಡು ಬರುವಂಥದ್ದು ಇದೆ. ಅವರ ಕಾರಿಗೆ ಚಾಲಕರು ಇರುವುದಿಲ್ಲ. ಆದ್ದರಿಂದ ವಾಹನವನ್ನು ಎಲ್ಲಿಯೋ ನಿಲ್ಲಿಸಿ ಬರುವುದು ಕಷ್ಟವಾಗುತ್ತದೆ. ಆದ್ದರಿಂದ ಸ್ವತಃ ಕಾರನ್ನು ಚಾಲನೆ ಮಾಡಿಕೊಂಡು ಬರುವಂತಹ ಶಾಸಕರ ವಾಹನಗಳನ್ನು ನಿಲ್ಲಿಸುವುದಕ್ಕೆ ಪ್ರತ್ಯೇಕವಾದಂತಹ ಒಂದು ಸಾಲು way ಎಂದು ಏನು ಕರೆಯುತ್ತೇವೆ ಅದನ್ನು ವಿಧಾನಸೌಧದಲ್ಲಿ ಮಾಡಬೇಕು.

**ಸಭಾಪತಿಯವರು:–**ತಾವು ಹೇಳುತ್ತಿರುವುದನ್ನು ವಿಧಾನಸೌಧದಲ್ಲಿ ಮಾಡುವುದಕ್ಕಾಗುವುದಿಲ್ಲ. ಶಾಸಕರ ಭವನದಲ್ಲಿ ಆ ವ್ಯವಸ್ಥೆಯನ್ನು ಮಾಡೋಣ. ಅಲ್ಲಿಂದ ಈ ಬ್ಯಾಟರಿ ಚಾಲಿತ ವಾಹನದಲ್ಲಿ ಶಾಸಕರುಗಳು ವಿಧಾನಸೌಧಕ್ಕೆ ಬರಲಿ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ತಾವು ಏನು ಒಳ್ಳೆಯ ಕೆಲಸ ಮಾಡಿದ್ದೀರಿ. ಇದನ್ನು ನಾನು ಕೂಡ ಅಭಿನಂದಿಸುತ್ತೇನೆ. ಎಲ್ಲಾ ಶಾಸಕರುಗಳು ಇದನ್ನು ಉಪಯೋಗ ಮಾಡಿಕೊಳ್ಳಿ ಎಂದು ತಮ್ಮ ಮುಖಾಂತರ ಹೇಳುತ್ತಿದ್ದೇನೆ.

## 2. ಸಂತಾಪ ಸೂಚನೆ

ಶ್ರೀಯುತರುಗಳಾದ ಸಿ.ಎಂ. ರೇವಣಸಿದ್ದಯ್ಯ, ಡಾ|| ಎಂ. ನಾಗಪ್ಪ, ಶ್ರೀ ವೇದಾಂತ ಹೆಮ್ಮಿಗೆ, ಫಕೀರಪ್ಪ ಕೊಪ್ಪದ, ಶ್ರೀ ಗುರುಪಾದಸ್ವಾಮಿ, ಪಂಡಿತ ಮಾಧವ ಗುಡಿ ಹಾಗೂ ಶ್ರೀ ಸತ್ಯಸಾಯಿಬಾಬ ಅವರುಗಳ ನಿಧನದ ಕುರಿತು–

**ಸಭಾಪತಿಯವರು: ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಸಿ.ಎಂ.ರೇವಣಸಿದ್ದಯ್ಯ, ಡಾ|| ಎಂ. ನಾಗಪ್ಪ, ಶ್ರೀವೇದಾಂತ ಹೆಮ್ಮಿಗೆ, ಶ್ರೀ ಪಕೀರಪ್ಪ ಕೊಪ್ಪದ, ಕೇಂದ್ರ ಮಾಜಿ ಸಚಿವರಾದ ಶ್ರೀ ಗುರುಪಾದಸ್ವಾಮಿ, ಖ್ಯಾತ ಹಿಂದುಸ್ಥಾನಿ ಗಾಯಕ ಪಂಡಿತ ಮಾಧವ ಗುಡಿ ಮತ್ತು ಲಕ್ಷಾಂತರ ಭಕ್ತರ ಪಾಲಿನ ಆರಾಧ್ಯ ದೈವ, ಬಡವರ ಅನ್ನದಾತ ಹಾಗೂ ಸೇವಾ ಕೈಂಕರ್ಯಗಳಿಂದ ದೇಶ ವಿದೇಶಗಳಲ್ಲಿ ಖ್ಯಾತಿ ಹೊಂದಿದ್ದ ದೇವಮಾನವನೆನಿಸಿಕೊಂಡಿದ್ದ ಪುಟ್ಟಪರ್ತಿ ಶ್ರೀ ಸತ್ಯಸಾಯಿಬಾಬಾ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.**

## 1. ಶ್ರೀ ಸಿ.ಎಂ. ರೇವಣಸಿದ್ದಯ್ಯ

**ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಸಿ.ಎಂ. ರೇವಣಸಿದ್ದಯ್ಯರವರು ದಿನಾಂಕ: 23.03.2011ರಂದು ನಿಧನ ಹೊಂದಿರುತ್ತಾರೆ.**

1927ರ ಜುಲೈ, 1ರಂದು ಸಿರಿಗೇರಿಯಲ್ಲಿ ಜನಿಸಿದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಕರ್ನಾಟಕ ಏಕೀಕರಣ ಹೋರಾಟ ಮತ್ತು ರೈತಪರ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಇವರು “ರೈತ ಬೆಳೆದರೆ ಮಾತ್ರ ಎಲ್ಲರ ಬದುಕು” ಎಂಬ ಧ್ಯೇಯವನ್ನು ಹೊಂದಿದ್ದರು. ಶಾಸಕರಾಗಿದ್ದಾಗಲೂ ಪ್ರತಿನಿತ್ಯ ಹೊಲ-ಗದ್ದೆಗಳಲ್ಲಿ ಕೆಲಸವನ್ನು ಮಾಡುತ್ತಿದ್ದರು. ಶ್ರೀಯುತರು ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರು ಮತ್ತು ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು, 1962 ಹಾಗೂ 1985ರಲ್ಲಿ ಸಿರುಗುಪ್ಪ ಮತಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಕರ್ನಾಟಕ ಏಕೀಕರಣ ಪ್ರಶಸ್ತಿ, ‘ಭೂಮಿ ತಾಯಿಯ ಚೊಚ್ಚಲ ಮಗ’ ಪ್ರಶಸ್ತಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ, ಸಜ್ಜನಿಕೆಯ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**2. ಡಾ|| ಎಂ. ನಾಗಪ್ಪ**

**ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಡಾ|| ಎಂ. ನಾಗಪ್ಪರವರು ದಿನಾಂಕ: 29.03.2011ರಂದು ನಿಧನ ಹೊಂದಿರುತ್ತಾರೆ.**

1927ರ ಅಕ್ಟೋಬರ್, 27ರಂದು ರಾಯಚೂರಿನ ಮಟಮಾರಿ ಗ್ರಾಮದಲ್ಲಿ ಜನಿಸಿದ ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು. ಹೈದರಾಬಾದ್ ವಿಮೋಚನಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಮೂರು ತಿಂಗಳುಗಳ ಕಾಲ ಸೆರೆಮನೆ ವಾಸವನ್ನು ಅನುಭವಿಸಿದ್ದರು. ಡಾ|| ರಾಮಮನೋಹರ ಲೋಹಿಯಾ ಅವರ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದ ಶ್ರೀಯುತರು ಶಾಂತವೇರಿ ಗೋಪಾಲಗೌಡರ ನಿಕಟವರ್ತಿಯಾಗಿದ್ದರು. 1952 ರಿಂದ 1967ರವರೆಗೆ ರಾಯಚೂರು ಪುರಸಭೆಯನ್ನು ಪ್ರತಿನಿಧಿಸಿದ್ದ ಇವರು ಜಿಲ್ಲಾ ಬಾರ್ ಕೌನ್ಸಿಲ್‌ನ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿರುತ್ತಾರೆ. 4ನೇ ವಿಧಾನ ಸಭೆಗೆ ರಾಯಚೂರು ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ, ಸಜ್ಜನಿಕೆಯ ಹಿರಿಯ ರಾಜಕಾರಣಿ ಹಾಗೂ ಮುತ್ಸದ್ದಿಯನ್ನು ಕಳೆದುಕೊಂಡಂತಾಗಿದೆ.**

**3. ಶ್ರೀ ಪಕೀರಪ್ಪ ಕೊಪ್ಪದ**

**ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಪಕೀರಪ್ಪ ಕೊಪ್ಪದರವರು ದಿನಾಂಕ:26.05.2011ರಂದು ನಿಧನ ಹೊಂದಿರುತ್ತಾರೆ.**

1930ರ ಜೂನ್, 20ರಂದು ಜನಿಸಿದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದು, 7ನೇಯ ವಿಧಾನಸಭೆಗೆ ರಾಮದುರ್ಗದಿಂದ ಆಯ್ಕೆಯಾಗಿ ದ್ದರು. ಗ್ರೈನ್ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಕೃಷಿಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಇವರು ಗೋಧಿ ಬೆಳೆಯಲ್ಲಿ ಮಾಡಿದ ಉತ್ತಮ ಸಾಧನೆಗಾಗಿ ಪ್ರಶಸ್ತಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಸರಳ, ಸಜ್ಜನಿಕೆಯ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

## 4. ಶ್ರೀ ವೇದಾಂತ ಹೆಮ್ಮಿಗೆ

**ಮಾಜಿ ಶಾಸಕರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೇದಾಂತ ಹೆಮ್ಮಿಗೆ ಅವರು ದಿನಾಂಕ: 04.05.2011ರಂದು ನಿಧನ ಹೊಂದಿರುತ್ತಾರೆ.**

1928ರ ಡಿಸೆಂಬರ್, 28ರಲ್ಲಿ ತಿ.ನರಸೀಪುರದ ಹೆಮ್ಮಿಗೆ ಗ್ರಾಮದಲ್ಲಿ ಜನಿಸಿದ ಇವರು ಬಿ.ಇ. ಪದವೀಧರರಾಗಿದ್ದು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಸೆರೆಮನೆ ವಾಸವನ್ನು ಅನುಭವಿಸಿದ್ದರು. ಅಲ್ಲದೇ ಗೋವಾ ವಿಮೋಚನಾ ಚಳುವಳಿಯಲ್ಲಿ ಸಕ್ರೀಯ ಪಾತ್ರ ವಹಿಸಿ ಚಿತ್ರಹಿಂಸೆ ಅನುಭವಿಸಿದ ಇವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸೆರೆವಾಸವನ್ನು ಅನುಭವಿಸಿದ್ದರು. ಸತತ 16 ವರ್ಷಗಳ ಕಾಲ ಟೌನ್ ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 8ನೇ ವಿಧಾನ ಸಭೆಗೆ ಕೃಷ್ಣರಾಜ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

**ಇವರ ನಿಧನದಿಂದಾಗಿ ರಾಜ್ಯವು ಒಬ್ಬ ಸಜ್ಜನ ರಾಜಕಾರಣಿಯನ್ನು ಕಳದುಕೊಂಡಂತಾಗಿದೆ.**

## 5. ಶ್ರೀ ಎಂ. ಎಸ್. ಗುರುಪಾದಸ್ವಾಮಿ

**ಕೇಂದ್ರ ಮಾಜಿ ಸಚಿವರಾದ ಶ್ರೀ ಎಂ. ಎಸ್. ಗುರುಪಾದಸ್ವಾಮಿ ಅವರು ದಿನಾಂಕ:10.05.2011ರಂದು ನಿಧನ ಹೊಂದಿರುತ್ತಾರೆ.**

7ನೇ ಆಗಸ್ಟ್, 1922 ರಂದು ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕಿನ ಮಾಲಂಗಿಯಲ್ಲಿ ಜನಿಸಿದ ಶ್ರೀಯುತರು ವೃತ್ತಿಯಲ್ಲಿ ವಕೀಲರು, 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು, 1951ರಲ್ಲಿ ರಾಜ್ಯ ಪತ್ರಕರ್ತರ ಸಂಘ ಮತ್ತು ಮೈಸೂರು ರಾಜ್ಯ ಬುದ್ಧಿಜೀವಿಗಳ ಸಂಘದ ಅಧ್ಯಕ್ಷರಾಗಿದ್ದರು, ಕೇಂದ್ರ ನಾಗರಿಕ ಸಮಿತಿ, ರಾಷ್ಟ್ರೀಯ ಸಲಹಾ ಮಂಡಳಿ, ಯುವ ಕಾಂಗ್ರೆಸ್, ರೇಷ್ಮೆ ಮಂಡಳಿ, ಚಹಾ ಮಂಡಳಿ, ನ್ಯಾಷನಲ್ ಪ್ರೆಸ್ ಕೌನ್ಸಿಲ್‌ನ ಸದಸ್ಯರಾಗಿ, ಹಲವು ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಜನತಾ ಪಕ್ಷದ ಸ್ಥಾಪಕರಲ್ಲಿ ಒಬ್ಬರಾಗಿದ್ದ ಇವರು ಇಂದಿರಾಗಾಂಧಿ, ವಿ.ಪಿ.ಸಿಂಗ್, ಮೊರಾಜಿ ದೇಸಾಯಿ, ಜಯಪ್ರಕಾಶ್ ನಾರಾಯಣ್, ಚರಣ್‌ಸಿಂಗ್‌ಮತ್ತಿತರ ನಾಯಕರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು. ಶ್ರೀಯುತರು “ಮೈಸೂರು ಗಾಂಧಿ” ಎಂದೆ ಜನಾನುರಾಗಿಯಾಗಿದ್ದರು.

1947 ರಿಂದ 1953ರವರೆಗೆ ‘ಪ್ರಜಾಮತ’ ವಾರಪತ್ರಿಕೆಯ ಸಂಪಾದಕರಾಗಿ ಸೇವೆಯನ್ನು ಸಲ್ಲಿಸಿದ್ದರು. ಕಿಸಾನ್ ಮಜ್ದೂರ್ ಪ್ರಜಾ ಪಕ್ಷದಿಂದ ಪ್ರಥಮ ಬಾರಿಗೆ ಮೈಸೂರು ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಅಣುಶಕ್ತಿ ಖಾತೆಯ ರಾಜ್ಯ ಸಚಿವರಾಗಿ ಶ್ರೀಮತಿ ಇಂದಿರಾಗಾಂಧಿ ಅವರ ಸಚಿವ ಸಂಪುಟದಲ್ಲಿ ಆಹಾರ, ಕೃಷಿ ಸಮುದಾಯ ಅಭಿವೃದ್ಧಿ – ಸಹಕಾರ ಸಚಿವರಾಗಿ ಮತ್ತು ಶ್ರೀ ವಿ.ಪಿ. ಸಿಂಗ್ ಸಂಪುಟದಲ್ಲಿ ಪೆಟ್ರೋಲಿಯಂ ಮತ್ತು ರಾಸಾಯನಿಕ ಖಾತೆ ಸಚಿವರಾಗಿ ಸೇವೆ ಸಲ್ಲಿಸಿದ್ದರು. 1960 ಮತ್ತು 1966ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದ ಇವರು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರಾಗಿಯೂ ಸಹ ಕಾರ್ಯನಿರ್ವಹಿಸಿದ್ದರು.

**ಇವರ ನಿಧನದಿಂದಾಗಿ ರಾಜ್ಯವು ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸರಳ, ಸಜ್ಜನ, ಮೌಲ್ಯವರ್ಧಿತ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

## 6. ಪಂಡಿತ ಮಾಧವ ಗುಡಿ

**ಖ್ಯಾತ ಹಿಂದುಸ್ಥಾನಿ ಗಾಯಕ ಪಂಡಿತ್ ಮಾಧವ ಗುಡಿ ಅವರು ದಿನಾಂಕ: 22.04.2011ರಂದು ನಿಧನ ಹೊಂದಿರುತ್ತಾರೆ.**

1941ರಲ್ಲಿ ಸಂಗೀತದ ತವರೂರು ಧಾರವಾಡದಲ್ಲಿ ಜನಿಸಿದ ಇವರು ಭಾರತ ರತ್ನ ಭೀಮಸೇನ ಜೋಶಿಯವರ ಸಂಗೀತಕ್ಕೆ ಮಾರುಹೋಗಿ ಬಾಲ್ಯದಲ್ಲಿಯೇ ಮನೆಯನ್ನು ತ್ಯಜಿಸಿ, ಭೀಮಸೇನ ಜೋಶಿಯವರ ಶಿಷ್ಯರಾಗಿ ಸೇರಿದ ಶ್ರೀಯುತರು ಸುದೀರ್ಘ 30 ವರ್ಷಗಳ ಕಾಲ ಜೋಶಿಯವರ ಪಟ್ಟ ಶಿಷ್ಯರಾಗಿದ್ದರು. ಸವಾಯಿ ಗಂಧರ್ವ ಕಾರ್ಯಕ್ರಮದಲ್ಲಿ "ಲಲಿತ್ ರಾಗ" ಸ್ವರವಿಸ್ತಾರಕ್ಕೆ ತನ್ನ ಗುರುಗಳಿಂದಲೇ ಮೆಚ್ಚುಗೆಯನ್ನು ಪಡೆದ ಖ್ಯಾತಿ ಇವರದು. ಪೇಜಾವರ ಅಧೋಕ್ಷಜ ಮಠದಿಂದ ಗಾನ ಭಾಸ್ಕರ ಬಿರುದು, ಕರ್ನಾಟಕ ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಮತ್ತು ಪರಿಮಳ ಗೆಳೆಯರ ಬಳಗದಿಂದ ಸಂಗೀತ ರತ್ನ, ಸಂಗೀತ ಸಾಧಕ, ಕಲಾ ವಿಕಾಸ ರತ್ನ, ಕಲಾ ತಿಲಕ ಹಾಗೂ ಮಹಾರಾಷ್ಟ್ರದ ಯಶವಂತರಾವ್ ಚೌಹಾಣ ಸ್ಮೃತಿ ಗೌರವ ಪ್ರಶಸ್ತಿಗಳಲ್ಲದೇ ಇನ್ನೂ ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

**ರಾಜ್ಯವು ಶ್ರೀಯುತರ ನಿಧನದಿಂದಾಗಿ "ಸಾರಸ್ವತ ಲೋಕ"ದ ಹೆಸರಾಂತ ಖ್ಯಾತ ಹಿಂದುಸ್ಥಾನಿ ಗಾಯಕರನ್ನು ಕಳೆದುಕೊಂಡಂತಾಗಿದೆ.**

## 7. ಶ್ರೀ ಸತ್ಯಸಾಯಿ ಬಾಬಾ

**ಅತ್ಯುನ್ನತ ಮಾನವ ಮೌಲ್ಯಗಳನ್ನು ಜಗತ್ತಿನ ಮುಂದೆ ತೆರೆದಿಟ್ಟ ಪುಟ್ಟಪರ್ತಿ ಶ್ರೀ ಸತ್ಯಸಾಯಿ ಬಾಬಾ ಅವರು ದಿನಾಂಕ: 24.04.2011ರಂದು ಪುಟ್ಟಪರ್ತಿಯಲ್ಲಿ ನಿಧನ ಹೊಂದಿರುತ್ತಾರೆ.**

1926ರ ನವೆಂಬರ್ 23ರಂದು ಆಂಧ್ರಪ್ರದೇಶದಲ್ಲಿ ಜನಿಸಿದ ಇವರು ಅತ್ಯುನ್ನತ ಮಾನವ ಮೌಲ್ಯಗಳನ್ನು ಜಗತ್ತಿನ ಮುಂದೆ ತೆರೆದಿಟ್ಟ ಮಹಾನ್ ಜ್ಞಾನಿ, ಐದು ದಶಕಗಳ ಕಾಲ ನಿರಂತರವಾಗಿ ಸಮಾಜ ಸೇವೆಯಲ್ಲಿ ತಮ್ಮನ್ನು

ತಾವು ತೊಡಗಿಸಿಕೊಂಡ ಕೀರ್ತಿ ಇವರದು. ದೇಶದ ವಿವಿಧ ನಗರಗಳಲ್ಲಿ ಶಾಲಾ ಮತ್ತು ಕಾಲೇಜುಗಳು, ಆಸ್ಪತ್ರೆಗಳು ಮತ್ತು ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿ ಬಡ ಜನರಿಗೆ ಆಶ್ರಯವನ್ನು ನೀಡಿ ಲಕ್ಷಾಂತರ ಜನರ ಆರಾಧ್ಯ ದೈವರಾಗಿದ್ದರು.

ಶ್ರೀಯುತರು 1948ರಲ್ಲಿ ಪ್ರಶಾಂತಿ ನಿಲಯ ಆಶ್ರಮ, 1954ರಲ್ಲಿ ಪುಟ್ಟಪಟರ್ತಿಯಲ್ಲಿ ಸಾರ್ವಜನಿಕ ಆಸ್ಪತ್ರೆ, 1968ರಲ್ಲಿ ಮುಂಬಯಿನಲ್ಲಿ ಸತ್ಯಂ ಮಂದಿರ, 1973ರಲ್ಲಿ ಚೆನ್ನೈನಲ್ಲಿ ಸುಂದರಂ ಮಂದಿರ, 2001ರಲ್ಲಿ ಬೆಂಗಳೂರಿನ ವೈಟ್‌ಫೀಲ್ಡ್, ಪುಟ್ಟಪರ್ತಿ, ಚೆನ್ನೈ ಹಾಗೂ ಅನಂತಪುರಂ ಜಿಲ್ಲೆಯ ಹಲವಾರು ಕಡೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ತೆರೆದು ಬಡ ಜನರಿಗೆ ಉಚಿತ ಆರೋಗ್ಯ ಚಿಕಿತ್ಸೆಯ ಸೌಲಭ್ಯವನ್ನು ಒದಗಿಸಿರುತ್ತಾರೆ. 1995ರಲ್ಲಿ ಆಂಧ್ರ ಪ್ರದೇಶ ರಾಯಲ್ ಸೀಮಾ ಭಾಗದ ಅನಂತಪುರಂ ಜಿಲ್ಲೆಯ 750 ಹಳ್ಳಿಗಳಿಗೆ ಅನುಕೂಲವಾಗುವಂತೆ 1.2 ಮಿಲಿಯನ್ ಜನರಿಗೆ ಶಾಶ್ವತವಾಗಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿರುವುದಲ್ಲದೆ 2004ರಲ್ಲಿ "ಸತ್ಯ ಸಾಯಿ ಗಂಗಾ ಜಲ" ಯೋಜನೆ ಮುಖಾಂತರ ಚೆನ್ನೈ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿ ಜನರ ನೀರಿನ ಬವಣೆಯನ್ನು ನೀಗಿಸಿದ ಕೀರ್ತಿ ಇವರದ್ದಾಗಿರುತ್ತದೆ.

ಆಂಧ್ರ ಪ್ರದೇಶ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲದೇ ವಿಶ್ವದ 178 ದೇಶಗಳಲ್ಲಿ ಲಕ್ಷಾಂತರ ಭಕ್ತರನ್ನು ಹೊಂದಿದ್ದ ಇವರು ಬಡವರ ಅನ್ನದಾತರಾಗಿ ತಮ್ಮ ಸೇವಾ ಕೈಂಕರ್ಯಗಳಿಂದ ದೇಶ-ವಿದೇಶಗಳಲ್ಲೂ ಖ್ಯಾತಿಯನ್ನು ಹೊಂದಿದ್ದರು.

**ಶ್ರೀಯುತರ ನಿಧನದಿಂದ ದೇಶವು ಒಬ್ಬ ಮಾನವೀಯ ಮೌಲ್ಯಗಳ ಅತ್ಯುಗ್ರ ಪ್ರತಿಪಾದಕರನ್ನು ಕಳೆದುಕೊಂಡಂತಾಗಿದೆ.**

**(12:30 ಗಂಟೆ)**

**ಪ್ರೊ॥ ಪಿ.ವಿ.ಕೃಷ್ಣಭಟ್ಟ (ನಾಮನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಎಂ.ಎಸ್.ಗುರುಪಾದಸ್ವಾಮಿ ಅವರ ಶ್ರದ್ಧಾಂಜಲಿಯ ವರ್ಣನೆಯ ಕೊನೆಯ ವಾಕ್ಯದಲ್ಲಿ 'ಮೌಲ್ಯವರ್ಧಿತ' ರಾಜಕಾರಣಿ ಎನ್ನುವಂತಹ ಶಬ್ದವಿದೆ. 'ಮೌಲ್ಯವರ್ಧಿತ' ಎಂಬುದು economic termಅಷ್ಟೆ, ರಾಜಕಾರಣಿಗಳಿಗೆ ಅಥವಾ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಅದನ್ನು ಹೇಳುವುದು ಸರಿಯಾಗುವುದಿಲ್ಲ. value added ಎಂಬ ಇಂಗ್ಲಿಷ್ ಶಬ್ದ ಏನಿದೆ ಅದರ translated word ಈ ಮೌಲ್ಯವರ್ಧಿತ ಎಂಬುದಾಗಿದೆ. ಆದುದರಿಂದ ಅದನ್ನು ತಿದ್ದುಪಡಿ ಮಾಡುವುದು ಸೂಕ್ತವೆನಿಸುತ್ತದೆ.

**ಸಭಾಪತಿಯವರು:–**'ಮೌಲ್ಯವರ್ಧಿತ ರಾಜಕಾರಣಿ' ಎಂಬುದಕ್ಕೆ ಬದಲಾಗಿ 'ಮೌಲ್ಯಾಧಾರಿತ ರಾಜಕಾರಣಿ' ಎಂದು ತಿದ್ದಿಕೊಳ್ಳಿ.

**ಡಾ॥ ವಿ.ಎಸ್. ಆಚಾರ್ಯ (ಸಭಾನಾಯಕರು):–**ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ನಿಧನರಾದಂತಹ ಹಿರಿಯ ನಾಲ್ವರು ಮಾಜಿ ಶಾಸಕರು, ಒಬ್ಬರು ಮಾಜಿ ಕೇಂದ್ರ ಸಚಿವರು, ಒಬ್ಬರು ಖ್ಯಾತ ಸಂಗೀತಜ್ಞರಾದ ಪಂಡಿತ ಮಾಧವ ಗುಡಿ ಅವರು ಮತ್ತು ಒಂದು ರೀತಿಯಲ್ಲಿ living legend ಎಂದು ಮೊನ್ನೆಯವರೆಗೂ ನಮ್ಮ ಮಧ್ಯೆ ಇದ್ದಂತಹ ಅತ್ಯಂತ ಶ್ರೇಷ್ಠ ಮಾನವತಾವಾದಿ ಶ್ರೀ ಸತ್ಯ ಸಾಯಿಬಾಬಾ ಅವರ ನಿಧನದ ಬಗ್ಗೆ ಅವರೆಲ್ಲರ ಸ್ಮರಣಾರ್ಥ ಶ್ರದ್ಧಾಂಜಲಿಯನ್ನು ಅರ್ಪಿಸುವಂತಹ ಒಂದು ನಿರ್ಣಯವನ್ನು ತಾವೇನು ತಂದಿದ್ದೀರಿ ಅದಕ್ಕೆ ತಮ್ಮೊಟ್ಟಿಗೆ ನಾವು ಸಹ ಧ್ವನಿಗೂಡಿಸುತ್ತಾ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸಬಯಸುತ್ತಿದ್ದೇವೆ. ಈ ನಾಲ್ವರು ಶಾಸಕರು ಮತ್ತು ಮಾಜಿ ಕೇಂದ್ರ ಸಚಿವರು ಇವರೆಲ್ಲರೂ 1930ಕ್ಕೂ ಮುಂಚೆ ಜನಿಸಿದವರಾಗಿದ್ದು ನನಗಿಂತಲೂ ಸುಮಾರು 10 ವರ್ಷ ಹಿರಿಯರು. ಹೀಗಾಗಿ ಕೆಲವರ ನೇರ ಪರಿಚಯ ನನಗೆ ಇಲ್ಲದಿರಬಹುದು ಆದರೆ ಅವರ ಬಗ್ಗೆ ಕೇಳಿದ್ದೇವೆ. ಶಾಸಕರಾಗಿ ಅವರನ್ನು ಆಯ್ಕೆ ಮಾಡಿದಂತಹ ಕ್ಷೇತ್ರದಲ್ಲಿ ಅದು ಕೃಷಿ ಕ್ಷೇತ್ರ ಇರಬಹುದು ಅಥವಾ ಬೇರೆ ಯಾವುದೇ ಕ್ಷೇತ್ರ ಇರಬಹುದು ಅವರು ಸಾಕಷ್ಟು

ಕೆಲಸ ಮಾಡಿದ್ದಾರೆ. ಇವರಲ್ಲಿ ಇಬ್ಬರು ಅಂದರೆ ಡಾ॥ ಎಂ. ನಾಗಪ್ಪನವರು ಹೈದ್ರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಸಹ ಅನುಭವಿಸಿದಂತಹವರು. ಅದೇರೀತಿ ವೇದಾಂತ ಹೆಮ್ಮಿಗೆಯವರು ಸ್ವಾತಂತ್ರ್ಯ ಚಳುವಳಿ ಮತ್ತು ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ್ದರು. ವೇದಾಂತ ಹೆಮ್ಮಿಗೆ ಅವರ ಪರಿಚಯ ಹಾಗೂ ಸ್ನೇಹ ಕೂಡ ನನಗಿತ್ತು. ಹೀಗಾಗಿ ನಾನು ಸಾಕಷ್ಟು ಸಲ ಅವರನ್ನು ಭೇಟಿಯಾಗಿ ಅವರೊಡನೆ ಮಾತುಕತೆ ನಡೆಸಿದ್ದೇನೆ. ಒಟ್ಟಿಗೆ ಕೆಲಸ ಕೂಡ ಮಾಡಿದ್ದೇವೆ. ಅವರು ಸ್ವಾತಂತ್ರ್ಯ ಚಳುವಳಿ ಮತ್ತು ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಗೋವಾ ವಿಮೋಚನಾ ಚಳುವಳಿಯಲ್ಲಿ ಜಗನ್ನಾಥರಾವ್ ಜೋಶಿಯವರು ಸಹ ಸೆರೆಮನೆ ವಾಸವನ್ನು ಅನುಭವಿಸಿ ಬಂದ ನಂತರ ಅಲ್ಲಿ ಅವರಿಗೆ ನೀಡಲಾದ ದೈಹಿಕ ಹಿಂಸೆಯ ಬಗ್ಗೆ ಹೇಳಿಕೊಂಡಿದ್ದರು. ಅದೇರೀತಿ ಇವರು ಸಹ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿ ಕಠಿಣವಾದ ದೇಹದಂಡನೆಗೆ ಒಳಗಾಗಿದ್ದರು. ಅವರು ಶಾಸಕರಾಗಿ ಮತ್ತು ಬೇರೆ ಬೇರೆ ರೀತಿಯಿಂದ ನಮ್ಮ ರಾಜ್ಯಕ್ಕೆ ಹಾಗೂ ಸಾರ್ವಜನಿಕ ಬದುಕಿಗೆ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ.

ಶ್ರೀ ಎಂ.ಎಸ್.ಗುರುಪಾದಸ್ವಾಮಿಯವರು, ನಮ್ಮ ರಾಜ್ಯ ಕಂಡಂತಹ ಒಬ್ಬ ಹಿರಿಯ ರಾಜಕಾರಣಿ. ಕೇಂದ್ರದಲ್ಲಿ ಹಲವು ಖಾತೆಗಳಲ್ಲಿ ಮೊದಲು ರಾಜ್ಯಮಟ್ಟದ ಸಚಿವರಾಗಿ ಅನಂತರ ಪೆಟ್ರೋಲಿಯಂ ಮತ್ತು ರಾಸಾಯನಿಕ ಖಾತೆ ಸಚಿವರಾಗಿ ಮತ್ತು ರಾಜ್ಯಸಭೆ ಸದಸ್ಯರಾಗಿ ಅವರು ಕೆಲಸ ಮಾಡಿದ್ದಾರೆ. ಕೊನೆಯವರೆಗೂ ತಾವು ನಂಬಿಕೊಂಡು ಬಂದಂತಹ ತತ್ವದಲ್ಲಿಯೇ ಅವರು ಶ್ರದ್ಧೆಯಿಂದ ಮುಂದುವರೆದಂತಹವರು. ಮೈಸೂರಿಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಅವರು ಒಂದೆರಡು ಸಲ ನನ್ನನ್ನು ಕರೆಸಿ ಮಾತನಾಡಿದ್ದುಂಟು. ನಾನಾಗಿಯೇ ಹೋಗಿ ಅವರನ್ನು ಭೇಟಿಯಾಗಿ ಬಂದಂತಹ ಸಂದರ್ಭಗಳೂ ಉಂಟು. ನಮಗೆ ಬೇಕಾದಂತಹ ಸಮಯೋಚಿತ ಸಲಹೆಗಳನ್ನು ಕೊಟ್ಟು ಮಾರ್ಗದರ್ಶನ ಮಾಡುತ್ತಿದ್ದಂತಹ ಒಬ್ಬರು ಹಿರಿಯ ರಾಜಕಾರಣಿ

ಅವರಾಗಿದ್ದರು. ಇವರೆಲ್ಲರ ನಿಧನದಿಂದಾಗಿ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಬಹುದು. ಅವರ ಆತ್ಮಕ್ಕೆ ಭಗವಂತನು ಸದ್ಗತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಪಂಡಿತ ಮಾಧವ ಗುಡಿ ಅವರು ಹಿಂದೂಸ್ಥಾನಿ ಸಂಗೀತದಿಂದ ಆಕರ್ಷಿತರಾಗಿ ಖ್ಯಾತ ಸಂಗೀತಜ್ಞರಾದ ಭಾರತ ರತ್ನ ಭೀಮಸೇನ ಜೋಶಿಯವರ ಶಿಷ್ಯರಾಗಿ, ಸಂಗೀತ ಅಭ್ಯಾಸ ಮಾಡಿ ಸುಮಾರು 30 ವರ್ಷ ಗಳ ಕಾಲ ಅವರ ಪಟ್ಟಶಿಷ್ಯರಾಗಿ ಸಾಧನೆ ಮಾಡಿದಂತಹವರು ಮತ್ತು ಅನೇಕ ಸಂಘಸಂಸ್ಥೆಗಳಿಂದ ಅವರು ಮನ್ನಣೆಯನ್ನು ಗಳಿಸಿ ರಾಜ್ಯದಲ್ಲಷ್ಟೇ ಅಲ್ಲದೆ ದೇಶದಲ್ಲಿ ಸಹ ಹಿಂದೂಸ್ಥಾನಿ ಸಂಗೀತದಲ್ಲಿ ಖ್ಯಾತಿಯನ್ನು ಪಡೆದಂತಹವರು. ಅವರ ನಿಧನದಿಂದ ಸಂಗೀತ ಲೋಕಕ್ಕೆ ನಿಜಕ್ಕೂ ತುಂಬಲಾಗದ ನಷ್ಟವಾಗಿದೆ ಎಂದು ಹೇಳಬಹುದು.

ಶ್ರೀ ಸತ್ಯಸಾಯಿ ಬಾಬಾ ಅವರ ಬಗ್ಗೆ ಶಬ್ದಗಳಿಂದ ವರ್ಣನೆ ಮಾಡುವುದಕ್ಕಾಗುವುದಿಲ್ಲ. ಅದು ಒಂದು ಅನುಭೂತಿ, ಸ್ವತಃ ಅನುಭವದಿಂದಲೇ ಅದನ್ನು ಅರ್ಥ ಮಾಡಿಕೊಳ್ಳಬೇಕು. ಸುಮಾರು ಮೂರು–ನಾಲ್ಕು ಬಾರಿ ಅವರ ದರ್ಶನವನ್ನು ಪಡೆಯುವಂತಹ ಅವಕಾಶ ನನಗೆ ಸಿಕ್ಕಿತ್ತು. 1969ರಲ್ಲಿ ಅವರು ಮಣಿಪಾಲದ ಗೋಪಾಲಕೃಷ್ಣ ದೇವಸ್ಥಾನದ ಎದುರಿನ ಬೃಂದಾವನದ ನಿರ್ಮಾಣ ಕಾರ್ಯದ ಶಂಕುಸ್ಥಾಪನೆಗೆ ಬಂದಂತಹ ಸಂದರ್ಭದಲ್ಲಿ ನಾನು ಅವರನ್ನು ಭೇಟಿಯಾಗಿದ್ದೇನು. ಅನಂತರ ಬೇರೆ ಬೇರೆ ಸಂದರ್ಭಗಳಲ್ಲಿ ನಾನು ನಮ್ಮ ರಾಷ್ಟ್ರೀಯ ನಾಯಕರಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಮತ್ತು ಶ್ರೀಯುತ ಲಾಲ್‌ಕೃಷ್ಣ ಅಡ್ವಾಣಿಯವರೊಡನೆ ವೈಟ್‌ಫೀಲ್ಡ್‌ನಲ್ಲಿ ಅವರನ್ನು ಭೇಟಿಯಾಗಿದ್ದೆವು. ಅವರ ದೃಷ್ಟಿ ನಮ್ಮ ಮೇಲೆ ಬಿದ್ದಾಗಲೇ ನಮಗೆ ಅದರಿಂದ ಒಂದು ವಿಶೇಷವಾದಂತಹ ಅನುಭವ ಉಂಟಾಗುತ್ತಿತ್ತು. ನಾನು ನನ್ನ ಸ್ವಂತ ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅವರು ಶಿಕ್ಷಣ ಕ್ಷೇತ್ರದಲ್ಲಿ, ಆರೋಗ್ಯ ಮತ್ತು ನೈರ್ಮಲ್ಯ

ಕ್ಷೇತ್ರದಲ್ಲಿ ಹಾಗೂ ಜನರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ವಿಚಾರದಲ್ಲಿ ಅದ್ಭುತವಾದ ಕೆಲಸವನ್ನು ಮಾಡಿದ್ದಾರೆ. ಬೆಟ್ಟಗುಡ್ಡಗಳ ಮಧ್ಯದಲ್ಲಿ ನಗಣ್ಯವಾಗಿದ್ದ ಸಣ್ಣ ಹಳ್ಳಿ ಪುಟ್ಟಪರ್ತಿ ಎಂಬಲ್ಲಿ ಆಗಿರುವಂತಹ ನಿರ್ಮಾಣಗಳೆಲ್ಲವೂ ಅವರ ಸೃಷ್ಟಿಯೆಂದೇ ಹೇಳಬಹುದು. ಅವುಗಳನ್ನು ಪ್ರತ್ಯಕ್ಷವಾಗಿ ನೋಡಿದಾಗ ಮಾತ್ರ ನಮಗೆ ಅವರು ಮಾಡಿರುವಂತಹ ಸಾಧನೆಗಳ ಪರಿಚಯವಾಗುತ್ತದೆ, ಅವರ ಯೋಜನೆಗಳು ಎಷ್ಟು ವಿಶಾಲವಾಗಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಅದೇ ರೀತಿ ವೈಟ್‌ಫೀಲ್ಡ್‌ನಲ್ಲಿ ಕೂಡ ಸಾಕಷ್ಟು ಕೆಲಸಗಳಾಗಿವೆ. ಯೋಗಾಯೋಗವೋ ಏನೋ ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಯವರು ಪುಟ್ಟಪರ್ತಿಗೆ ಹೋಗಿ ಶ್ರೀ ಸತ್ಯಸಾಯಿ ಬಾಬಾ ಅವರ ದರ್ಶನವನ್ನು ಮಾಡಿಬರೋಣ ಬನ್ನಿ ಎಂದು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರು. ಹೀಗಾಗಿ ಅಂತಿಮ ಕ್ಷಣದ ಒಂದು ದರ್ಶನಭಾಗ್ಯ ಸಹ ನನಗೆ ಕಳೆದ ತಿಂಗಳು ಸಿಕ್ಕಿತ್ತು. ಅಂತಹ ಅವಕಾಶ ನನಗೆ ಸಿಗುತ್ತದೆ ಎಂದು ನಾನು ಖಂಡಿತವಾಗಿಯೂ ಭಾವಿಸಿರಲಿಲ್ಲ. ಅವರ ಸ್ಮರಣೆ ಈ ದೇಶದ ಜನಮಾನಸದಲ್ಲಿ ಬಹಳಷ್ಟು ಕಾಲ ಉಳಿಯುವಂತಹ ಒಂದು ದೀರ್ಘಕಾಲೀನವಾದಂತಹ ಜನಸೇವೆಯನ್ನು ಮತ್ತು ಆ ರೀತಿಯ ಮೌಲ್ಯಗಳನ್ನು ಎತ್ತಿಹಿಡಿಯುವಂತಹ ಕೆಲಸಗಳನ್ನು ಅವರು ಮಾಡಿದ್ದಾರೆ. ಅವರ ಆ ಒಂದು ಸ್ಮರಣೆಗೆ ನಾನು ಮತ್ತೊಮ್ಮೆ ಗೌರವ ಪೂರ್ಣವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ. ಈ ಏಳು ಜನ ಮಹನೀಯರೇನಿದ್ದಾರೆ ಅವರಲ್ಲಿ ಐವರು ಸಾರ್ವಜನಿಕ ಬದುಕಿನಲ್ಲಿದ್ದಂತಹವರು, ಒಬ್ಬರು ಸಂಗೀತ ಲೋಕದಲ್ಲಿ ಹಾಗೂ ಮತ್ತೊಬ್ಬರು ಆಧ್ಯಾತ್ಮ ಮತ್ತು ಜನಸೇವೆಯ ಕ್ಷೇತ್ರದಲ್ಲಿದ್ದಂತಹ ಮಹಾನುಭಾವರು. ಅವರೆಲ್ಲರ ಆತ್ಮಕ್ಕೂ ಭಗವಂತ ಚಿರಶಾಂತಿಯನ್ನು ನೀಡಲೆಂದು ನಿಮ್ಮೊಟ್ಟಿಗೆ ನನ್ನ ಶ್ರಧ್ಧಾಂಜಲಿಯನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಡಾ|| ಎಸ್. ಆರ್. ಲೀಲಾ:**–ಸನ್ಮಾನ್ಯ ಸಭಾಪತಿಯವರೇ, ಈ ಸಂತಾಪ ಸೂಚನೆಯಲ್ಲಿ ಇನ್ನೂ ಒಂದು ಸಣ್ಣ ತಿದ್ದುಪಡಿ ಆಗಬೇಕಾಗಿದೆ.

ಶ್ರೀ ಸತ್ಯಸಾಯಿ ಬಾಬಾ ಅವರ ಸಂತಾಪ ಸೂಚನೆಯ ವರ್ಣನೆಯ ಕೊನೆಯ ಪ್ಯಾರಾದಲ್ಲಿ 'ಶ್ರೀಯುತರ ನಿಧನದಿಂದ ದೇಶವು ಒಬ್ಬ ಮಾನವೀಯ ಮೌಲ್ಯಗಳ 'ಅತ್ಯುಗ್ರ' ಪ್ರತಿಪಾದಕರನ್ನು ಕಳೆದುಕೊಂಡಂತಾಗಿದೆ' ಎಂದು ಇದೆ. ಇಲ್ಲಿ 'ಅತ್ಯುಗ್ರ' ಎಂದು ಹೇಳುವುದು ಸರಿಯಾಗುವುದಿಲ್ಲ. ಆದ್ದರಿಂದ 'ಅತ್ಯುಗ್ರ ಪ್ರತಿಪಾದಕರು' ಎಂಬುದಕ್ಕೆ ಬದಲಾಗಿ 'ಅತ್ಯುತ್ತಮ ಪ್ರತಿಪಾದಕರು' ಎಂದು ತಿದ್ದಿಕೊಳ್ಳುವುದು ಸೂಕ್ತವೆನಿಸುತ್ತದೆ.

**ಸಭಾಪತಿಯವರು:**-ಅದನ್ನು 'ಅತ್ಯುತ್ತಮ' ಎಂದು ತಿದ್ದಿಕೊಳ್ಳಿ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):**-ಮಾನ್ಯ ಸಭಾಪತಿಯವರೆ, ಈ ದಿನ ತಾವೇನು ಸಭೆಯ ಮುಂದೆ ಬಹಳ ಶ್ರೇಷ್ಠ ಮತ್ತು ಹಿರಿಯ ವ್ಯಕ್ತಿಗಳು ಏನು ನಿಧನರಾಗಿದ್ದಾರೆ ಅವರ ಬಗ್ಗೆ ಸಂತಾಪ ಸೂಚನೆಯ ಪ್ರಸ್ತಾಪವನ್ನು ಮಂಡಿಸಿದ್ದೀರಿ, ಅದಕ್ಕೆ ನಾನು ತಮಗೆ ವಂದಿಸುತ್ತಾ, ಹಿರಿಯರ ಬಗ್ಗೆ ಕೆಲವೇ ಕೆಲವು ಮಾತುಗಳನ್ನಾಡಲು ಇಷ್ಟಪಡುತ್ತೇನೆ. ಏಕೆಂದರೆ, ನನಗೆ ಇವರಲ್ಲಿ ಮಾನ್ಯ ಗುರುಪಾದಸ್ವಾಮಿಯವರನ್ನು ಹೊರತುಪಡಿಸಿ, ಉಳಿದವರ್ಯಾರು ನನಗೆ ಅಷ್ಟು ಪರಿಚಯವಿಲ್ಲ. ಆದರೆ ನನಗೆ ತಿಳಿದಿರುವುದೇನೆಂದರೆ, ಇವರೆಲ್ಲರೂ great personality ಹೊಂದಿರುವಂಥವರು. ಅಂದರೆ ಬಹಳಷ್ಟು ನಮ್ಮ ರಾಜಕೀಯದಲ್ಲಿ ಮತ್ತು ನಾಡಿನಲ್ಲಿ ಒಂದು ಒಳ್ಳೆಯ ಸೇವೆಯನ್ನು ಮಾಡಿ, ಬದುಕಿನಲ್ಲಿ ಒಂದು ಒಳ್ಳೆಯ ಮಾರ್ಗದರ್ಶನವನ್ನು ಇಟ್ಟುಕೊಂಡು, ಬದುಕಿ ಬಾಳಿದಂತಹ ವ್ಯಕ್ತಿಗಳು. ಇವತ್ತಿನ ರಾಜಕಾರಣಕ್ಕೆ ನಿಜವಾಗಿಯೂ ಅವರೆಲ್ಲರೂ ದೊಡ್ಡ ಆದರ್ಶಪ್ರಾಯರಾಗುತ್ತಾರೆ. ಇಂತಹ ವ್ಯಕ್ತಿಗಳಷ್ಟು ಮುಂದೆ ನಾವು ರಾಜಕೀಯದಲ್ಲಿ ಬೆಳೆಯುವುದಕ್ಕೆ ಆಗುವುದಿಲ್ಲವೇನೋ ಎಂದು ನನಗನ್ನಿಸುತ್ತಿದೆ.

ಅದೇ ರೀತಿ ಡಾ|| ಎಂ. ನಾಗಪ್ಪನವರು ರಾಯಚೂರಿನ ಮಟಮಾರಿ ಗ್ರಾಮದಲ್ಲಿ ಜನಿಸಿದ ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು, ಹೈದರಾಬಾದ್ ವಿಮೋಚನಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ

ಮೂರು ತಿಂಗಳುಗಳ ಕಾಲ ಸೆರೆಮನೆ ವಾಸವನ್ನು ಅನುಭವಿಸಿದ್ದರು. ಡಾ॥ ರಾಮಮನೋಹರ ಲೋಹಿಯಾ ಅವರ ವಿಚಾರಧಾರೆಗಳಿಂದ ಪ್ರಭಾವಿತರಾಗಿ ಕೆಲಸ ಮಾಡಿದಂತಹ ಶ್ರೀಯುತರು ಶಾಂತವೇರಿ ಗೋಪಾಲಗೌಡರ ಶಿಷ್ಯರಾಗಿದ್ದರೆಂದರೆ, ನಿಜವಾಗಿಯೂ ಸಹ ಅವರು ತುಂಬಾ ಶ್ರೇಷ್ಠ ವ್ಯಕ್ತಿಯಾಗಿದ್ದರು. ಶ್ರೀಯುತರ ನಿಧನದಿಂದಾಗಿ ಇವತ್ತು ನಮ್ಮ ರಾಜಕಾರಣದಲ್ಲಿ ರಾಜಕೀಯ ಮೌಲ್ಯ ಒಂದು ರೀತಿಯಲ್ಲಿ ಕುಸಿಯುತ್ತಿರುವ ಸಂದರ್ಭದಲ್ಲಿ ನಾವು ಏನು ಕಳೆದುಕೊಳ್ಳುತ್ತಿದ್ದೇವೆ ಎಂಬ ಭಾವನೆ ನನಗೆ ಉಂಟಾಗಿದೆ.

ಶ್ರೀಯುತ ಪಕೀರಪ್ಪ ಕೊಪ್ಪದ ಇವರು ವೃತ್ತಿಯಲ್ಲಿ ಕೃಷಿಕರಾಗಿದ್ದು, ಗ್ರೇನ್ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಅಂದರೆ ನಮ್ಮ ಊರಿನಲ್ಲಿ ಒಂದು Grain Bank ಇದೆ, ಅಂದರೆ ಭತ್ತವನ್ನು ಸಂಗ್ರಹಣೆ ಮಾಡಿ ಅದು ಯಾರಿಗೆ ಅಗತ್ಯವಿದೆಯೋ ಅಂಥವರಿಗೆ ಅದನ್ನು ಬಡ್ಡಿಗೆ ಕೊಡುತ್ತಿದ್ದರು. ಮೂಡಗೆರೆಯಲ್ಲಿ ಆ ಕಾಲದಲ್ಲಿಯೇ Grain Bank ಎಂದು ಮಾಡಿ ಎಷ್ಟೆಲ್ಲಾ ಯೋಜನೆಯನ್ನು ಮಾಡಿದ್ದರು ಎಂದರೆ ನಿಜವಾಗಿಯೂ ನಾವೆಲ್ಲರೂ ಹೆಮ್ಮೆ ಪಡುವಂತಹ ವಿಷಯವಾಗಿದೆ. ಇಂತಹ ಕಾರ್ಯಕ್ರಮಗಳನ್ನು ನಾವು ಮೈಗೂಡಿಸಿಕೊಂಡು ಸಮಾಜದಲ್ಲಿ ಇನ್ನೂ ಎತ್ತರ ಬೆಳೆಯಬೇಕೆಂದು ನನಗನ್ನಿಸುತ್ತಿದೆ. ಅವರ ಆತ್ಮಕ್ಕೂ ಸಹ ನಾನು ಶಾಂತಿಯನ್ನು ಕೋರುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ ಅವರ ಬಗ್ಗೆ ನಾನು ಬಹಳಷ್ಟು ಕೇಳಿದ್ದೆ. ಅವರನ್ನು ಭೇಟಿಯಾಗುವುದಕ್ಕೆ ನನಗೆ ಯಾವುದೇ ಒಂದು ಸಂದರ್ಭ ಒದಗಿ ಬಂದಿರಲಿಲ್ಲ. ಶ್ರೀಯುತರು ಶಾಸಕರು ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಸೆರೆಮನೆ ವಾಸವನ್ನು ಅನುಭವಿಸಿದ್ದರು. ಮೈಸೂರಿನಲ್ಲಿ ವೇದಾಂತ ಹೆಮ್ಮಿಗೆ ಎಂದರೆ ಎಲ್ಲರಿಗೂ ಗೊತ್ತಿರುವಂತಹ ಒಬ್ಬ ವ್ಯಕ್ತಿಯಾಗಿದ್ದರು. ಅವರು ಸತತವಾಗಿ 16 ವರ್ಷಗಳ ಕಾಲ ಟೌನ್

ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು ಎಂದರೆ ನಿಜವಾಗಿಯೂ ಅದು ಒಂದು ದೊಡ್ಡ ಸಾಧನೆ. ಅವರ ಒಂದು ಆದರ್ಶ ಕೂಡ ನಮಗೆಲ್ಲರಿಗೂ ಆದರ್ಶವಾಗಬೇಕಾಗುತ್ತದೆ. ಶ್ರೀ ವೇದಾಂತ ಹೆಮ್ಮಿಗೆ ಅವರು ಶಾಸಕರು ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಸೆರೆಮನೆ ವಾಸವನ್ನು ಅನುಭವಿಸಿ ಕೀರ್ತಿಯನ್ನು ಪಡೆದಿದ್ದರು. ಆರೀತಿಯ ಒಂದು ಕೀರ್ತಿ ನಾವುಗಳು ಯಾರು ಪಡೆಯುವುದಕ್ಕೆ ಸಾಧ್ಯವಿಲ್ಲವೇನೋ ಎಂದು ನನಗನ್ನಿಸುತ್ತಿದೆ. ರೈತರು ಬೆಳೆದರೆ ಮಾತ್ರ ಎಲ್ಲರ ಬದುಕು ಎಂದು ರೈತರ ಬಗ್ಗೆ ಅಪಾರವಾದ ಕಾಳಜಿಯನ್ನು ವಹಿಸಿ, ರೈತಪರ ಕೆಲಸ ಮಾಡಿ ಆದರ್ಶಪ್ರಾಯರಾಗಿದ್ದರು ಮತ್ತು ಸರಳ ಸಜ್ಜನಿಕೆಯಿಂದ ಹೆಸರು ಮಾಡಿದ್ದಾರೆ. ಅವರ ಆದರ್ಶವನ್ನೂ ಕೂಡ ನಾವು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಅವರಿಗೂ ಸಹ ನಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸಬೇಕಾಗುತ್ತದೆ.

ಕೇಂದ್ರ ಮಾಜಿ ಸಚಿವರಾದ ಶ್ರೀ ಎಂ.ಎಸ್.ಗುರುಪಾದಸ್ವಾಮಿಯವರು ಶಾಸಕರಾಗುವುದಕ್ಕಿಂತ ಮೊದಲು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಆ ಕಾಲದಲ್ಲಿಯೇ ಮೈಸೂರು ರಾಜ್ಯ ಬುದ್ಧಿಜೀವಿಗಳ ಸಂಘ ಮಾಡಿದ್ದರು ಎಂದರೆ ಅವರು ಯಾವ ದೃಷ್ಟಿಯನ್ನು ಇಟ್ಟುಕೊಂಡು ಮಾಡಿದ್ದರು ಎಂದು ಗೊತ್ತಾಗುವುದಿಲ್ಲ. ಆದರೆ ಇವತ್ತಿನ ದಿವಸ ಬುದ್ಧಿ ಜೀವಿಗಳ ಸಂಘ ಬೇಕಾಗಿದೆಯೆಂದು ನನಗನ್ನಿಸುತ್ತಿದೆ. ಎಲ್ಲರಿಗೂ ಬುದ್ಧಿ ಹೇಳುವಂತಹ ಒಂದು ಸಂಘ ಬೇಕಾಗಿದೆ. ಅದು ರಾಜಕೀಯವಾಗಿರಬಹುದು, ವ್ಯವಹಾರಿಕವಾಗಿರಬಹುದು ಅಥವಾ ಸಾರ್ವಜನಿಕವಾಗಿರಬಹುದು. ಬುದ್ದಿಜೀವಿಗಳು ನಮಗೆ ಬೇಕಾಗುತ್ತಾರೆ. ಆದರೆ ನಾವು ಎಷ್ಟರ ಮಟ್ಟಿಗೆ ಅವರನ್ನು ಬಳಸಿಕೊಳ್ಳುತ್ತೇವೆ ಎಂಬುದು ಬಹಳ ಮುಖ್ಯ. ಅಲ್ಲದೆ ಅವರು ನ್ಯಾಷನಲ್ ಪ್ರೆಸ್ ಕೌನ್ಸಿಲ್‌ನ ಸದಸ್ಯರಾಗಿಯೂ ಸಹ ಕಾರ್ಯ ನಿರ್ವಹಿಸಿದ್ದರು. ಜನತಾ ಪಕ್ಷದ ಸ್ಥಾಪಕರಲ್ಲಿ ಒಬ್ಬರಾಗಿದ್ದ ಇವರು ಶ್ರೀಮತಿ ಇಂದಿರಾಗಾಂಧಿ, ವಿ.ಪಿ.ಸಿಂಗ್, ಮೊರಾರ್ಜಿ ದೇಸಾಯಿ, ಜಯಪ್ರಕಾಶ್ ನಾರಾಯಣ್, ಚರಣ್‌ಸಿಂಗ್ ಮತ್ತಿತರ ನಾಯಕರೊಂದಿಗೆ ನಿಕಟ ಸಂಬಂಧವನ್ನು

ಹೊಂದಿದ್ದರು. ಅಲ್ಲದೆ ಕೇಂದ್ರದಲ್ಲಿ ಶ್ರೀಮತಿ ಇಂದಿರಾಗಾಂಧಿ ಅವರ ಸಚಿವ ಸಂಪುಟದಲ್ಲಿ ಕೃಷಿ ಸಮುದಾಯ ಅಭಿವೃದ್ಧಿ-ಸಹಕಾರ ಸಚಿವರಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ ಎಂಬ ವಿಷಯವನ್ನು ಕೇಳಿದ್ದೇವೆ. ಇವತ್ತು ಅವರ ನಿಧನ ಕೂಡ ನಮ್ಮ ರಾಜಕೀಯ ಇತಿಹಾಸದಲ್ಲಿ ತುಂಬಲಾರದ ನಷ್ಟ ಉಂಟಾಗಿದೆಯೆಂದು ಹೇಳಬಯಸುತ್ತೇನೆ. ಇಂತಹ ದೊಡ್ಡ ದೊಡ್ಡ ರಾಜಕಾರಣಿಗಳ ನಿಧನ ತುಂಬಲಾರದ ನಷ್ಟವಾಗಿದೆ. ಇವರೆಲ್ಲರ ಆದರ್ಶವನ್ನು ನಾವು ಬದುಕಿನಲ್ಲಿ ಅಳವಡಿಸಿಕೊಂಡು ನಮ್ಮ ರಾಜಕೀಯ ಜೀವನವನ್ನು ಇನ್ನಷ್ಟು ಸರಳ, ಸಜ್ಜನಿಕೆಯಿಂದ ಕೂಡಿರಬೇಕೆಂದು ಹೇಳಬಯಸುತ್ತೇನೆ.

ಶ್ರೀ ಪಂಡಿತ ಮಾಧವ ಗುಡಿ ಅವರು ಸಹ ಖ್ಯಾತ ಹಿಂದೂಸ್ಥಾನಿ ಗಾಯಕರಾಗಿದ್ದರು. ಅವರು ಇವತ್ತಿನ ದಿವಸ ಇಲ್ಲವೆಂದು ಹೇಳಿದರೆ ಸಂಗೀತ ಕ್ಷೇತ್ರ ಬಡವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಆದರೂ ಸಹ ಅವರ ಆಶೀರ್ವಾದದಿಂದ ಅವರ ಶಿಷ್ಯಂದಿರು ಅವರ ಹಾದಿಯಲ್ಲಿ ನಡೆದು ಆ ಕ್ಷೇತ್ರವನ್ನು ಇನ್ನಷ್ಟು ಚೆನ್ನಾಗಿ ಬೆಳೆಸುತ್ತಾರೆಂದು ಭಾವಿಸಿ ಅವರಿಗೂ ಸಹ ನನ್ನ ಶ್ರದ್ಧಾಂಜಲಿಯನ್ನು ಸಮರ್ಪಣೆ ಮಾಡಬಯಸುತ್ತೇನೆ.

ಶ್ರೀ ಸತ್ಯಸಾಯಿ ಬಾಬಾ ಅವರು ದೇವಮಾನವರೆಂದೇ ಹೆಸರಾಗಿದ್ದರು. ಪ್ರಾರಂಭದಲ್ಲಿ ಅವರು ಸ್ವಲ್ಪ ವಿವಾದಕ್ಕೂ ಸಹ ಒಳಗಾಗಿದ್ದರು. ಪವಾಡ ಮಾಡುವುದರಲ್ಲಿ ಅವರನ್ನು ಬಹಳಷ್ಟು ಜನ ಟೀಕೆ ಮಾಡಿದ್ದಾರೆ. ನಾನು ಕಾಲೇಜಿನ ವಿದ್ಯಾರ್ಥಿ ಆಗಿದ್ದಂತಹ ಸಂದರ್ಭದಲ್ಲಿ ಶ್ರೀ ಹೆಚ್.ಎನ್. ನರಸಿಂಹಯ್ಯ ಹಾಗೂ ಡಾ|| ಕೋವೂರ್ ಇವರ ಪವಾಡದ ಬಗ್ಗೆ ಅವರಿಗೆ ಒಂದು ಸವಾಲನ್ನು ಸಹ ಹಾಕಿದ್ದರು. ಆ ಸವಾಲಿಗೆ ಅವರಿಂದ ಸರಿಯಾ ದಂತಹ ಒಂದು ಉತ್ತರ ಬರಲಿಲ್ಲ. ಆದರೆ ಒಂದು ಮಾತು ಕೇಳಿ ಬಂತು. ನಾನು ಆಗ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ಆಗಿದ್ದಾಗ ಶ್ರೀ ಹೆಚ್. ಎನ್. ನರಸಿಂಹಯ್ಯನವರು ವೈಸ್ ಛಾನ್ಸಲರ್ ಪದವಿಯಿಂದ ಕೆಳಗಿಳಿಯುವಂತಹ ಒಂದು ಸಂದರ್ಭ ಬಂತು. ಅಲ್ಲಿ ಸಾಕಷ್ಟು ವಿದ್ಯಾರ್ಥಿಗಳ

ಗಲಾಟೆಯು ಸಹ ಆಗುತ್ತಿತ್ತು. ಆದರೆ ಅದಕ್ಕೆ ಒಂದು ಅರ್ಥವನ್ನು ಕಲ್ಪಿಸಿದರು. ಏನೆಂದರೆ, ಸಾಯಿಬಾಬಾರವರ ಪವಾಡವನ್ನು ಪ್ರಶ್ನೆ ಮಾಡಿದ್ದರಿಂದ ಅವರು ಈ ಸ್ಥಾನವನ್ನು ಕಳೆದುಕೊಳ್ಳಬೇಕಾಯಿತು ಎಂದು ಜನರು ಮಾತನಾಡುವುದಕ್ಕೆ ಪ್ರಾರಂಭಿಸಿದರು. ಅದು ಎಷ್ಟರ ಮಟ್ಟಿಗೆ ಸತ್ಯ ಎಂಬುದು ನಮ್ಮ ನಮ್ಮ ವಿವೇಚನೆಗೆ ಬಿಟ್ಟಂತಹ ವಿಷಯವಾಗಿದೆ. ಆದರೆ ಕೊನೆಗೆ ಅವರು ಅವರ ಪವಾಡಗಳಿಂದ ದೂರವಾದರು, ಅವರು ಆಪಾದನೆಗಳನ್ನು ಕಡಿಮೆ ಮಾಡಿಕೊಳ್ಳಬೇಕು ಎಂಬ ದೃಷ್ಟಿಯಿಂದಲೋ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಬಹಳಷ್ಟು ಕೆಲಸಗಳನ್ನು ಮಾಡಿದರು. ನೀರಿಲ್ಲದೆ ಇರುವಂತಹ ಎಷ್ಟೋ ಕಡೆ ನೀರು ಒದಗಿಸುವಂತಹ ಕೆಲಸ ಮಾಡಿದರು. ಅಲ್ಲದೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮಾಡಿ ಬಡಜನರು ಹೃದಯದ ತೊಂದರೆಯಿಂದಾಗಲಿ ಅಥವಾ ಕಿಡ್ನಿ ತೊಂದರೆಯಿಂದಾಗಲಿ ಬಳಲುತ್ತಿದ್ದಂತ ವರಿಗೆ ಉಚಿತವಾಗಿ ಸೇವೆಯನ್ನು ಒದಗಿಸುತ್ತಿದ್ದಾರೆ. ಅವರ ಈ ಎಲ್ಲಾ ಉತ್ತಮ ಕೆಲಸಗಳನ್ನು ನಾವು ಇವತ್ತಿನ ದಿವಸ ನೆನಪು ಮಾಡಿಕೊಳ್ಳ ಬೇಕಾಗುತ್ತದೆ. ಒಂದು ಸರ್ಕಾರ ಮಾಡದೆ ಇರುವಂತಹ ಕೆಲಸವನ್ನು ಒಬ್ಬ ವ್ಯಕ್ತಿಯಾಗಿ ಸಾರ್ವಜನಿಕರ ಸಹಕಾರದೊಂದಿಗೆ ಮತ್ತು ಇಚ್ಛಾಸಕ್ತಿ ಮತ್ತು ಆತ್ಮಶಕ್ತಿಯೊಂದಿಗೆ ಮಿನಿ ಗೌರ್ನಮೆಂಟ್ ಮಾದರಿಯಲ್ಲಿ ಇವರು ಕೆಲಸ ಮಾಡಿದ್ದಾರೆಂದರೆ ಅವರಿಗೆ ನಾವು ಎಷ್ಟು ಮೆಚ್ಚುಗೆಯನ್ನು ವ್ಯಕ್ತಪಡಿಸಿದರೂ ಸಾಲದು. ಆದರೆ ನಾನು ಕೂಡ ಅವರನ್ನು ಒಮ್ಮೆ ನೋಡಬೇಕು ಎಂಬ ಮನಸ್ಸಿತ್ತು.

ಒಂದು ದಿವಸ ಶ್ರೀರಂಗಪಟ್ಟಣದ ಶಾಸಕರು ಹಾಗೂ ನಮ್ಮ ಸ್ನೇಹಿತರಾದ ಶ್ರೀಮತಿ ದಮಯಂತಿ ಬೋರೆಗೌಡರವರು, ಸಾಯಿಬಾಬಾರವರು ವೈಟ್‌ಫೀಲ್ಡ್‌ಗೆ ಬಂದಿದ್ದಾರೆ ನನಗೆ ಅಲ್ಲಿ ಹೋಗಲಿಕ್ಕೆ ಅನುಮತಿ ದೊರೆತಿದೆ ಎಂದು ಹೇಳಿ, ನನ್ನನ್ನು ಕೂಡ ಅಲ್ಲಿಗೆ ಕರೆದುಕೊಂಡು ಹೋದರು. ನಾವು ಅಲ್ಲಿ ಹೋಗಿ ಅವರ ದರ್ಶನಕ್ಕಾಗಿ ಕುಳಿತಾಗ ಅವರು ಎಷ್ಟು ಹೊತ್ತಾದರೂ ಬರಲಿಲ್ಲ. ನನಗೆ ಒಂದು ರೀತಿಯ ಕುತೂಹಲ ಎಲ್ಲರೂ ಅವರನ್ನು

ದೇವಮಾನವರೆಂದು ನಂಬಿಕೊಂಡಿರುವಾಗ ಅವರು ಹೇಗೆ ಬರಬಹುದು ಅವರೇನಾದರೂ ನಡೆದುಕೊಂಡು ಬರುತ್ತಾರೋ ಅಥವಾ ತೇಲಿಕೊಂಡು ಬರುತ್ತಾರೋ ಎನ್ನುವ ಕುತೂಹಲದಿಂದ ಕಾಯ್ದಿದ್ದೆನು. ನಾನು ಈ ರೀತಿ ಯೋಚನೆ ಮಾಡಿಕೊಂಡು ಎಲ್ಲೋ ನೋಡಿಕೊಂಡು ಕುಳಿತಿದ್ದರೆ ನಾನು ಕುಳಿತ ಕಡೆಯಿಂದಲೇ ಸಾಯಿಬಾಬಾ ರವರು ನಡೆದುಕೊಂಡು ಹೋದರು. ಸರಿಯೋ ತಪ್ಪೋ ನಮ್ಮ ಸ್ನೇಹಿತರು ಬಾಬಾರವರಿಗೆ ನಮಸ್ಕಾರ ಮಾಡಿಕೊಂಡ ಹಾಗೆಯೇ ನಾನು ಕೂಡ ಅವರಿಗೆ ನಮಸ್ಕರಿಸಿದೆನು. ಅಂತಹ ಅವಕಾಶ ನನಗೂ ದೊರಕಿತ್ತು. ಆದರೆ ಅವರು ಹೇಗೆ ನಡೆದುಕೊಂಡು ಬಂದರು ಎನ್ನುವುದನ್ನು ಸರಿಯಾಗಿ ನೋಡಲಿಕ್ಕೆ ಸಾಧ್ಯವಾಗಲಿಲ್ಲ.

ಸಾಯಿಬಾಬಾರವರು ಬಹಳಷ್ಟು ಜನ ನೊಂದವರಿಗೆ ಜೀವನದಲ್ಲಿ ಬೆಂದವರಿಗೆ ಮತ್ತು ಸಂಕಷ್ಟದಲ್ಲಿರುವವರಿಗೆ ತಮ್ಮ blessings ನಿಂದ ಅವರಿಗೆ ಜೀವನದಲ್ಲಿ confidenceನ್ನು ಮೂಡಿಸಿದ್ದಾರೆ. ಇದು ಸತ್ಯವೋ ಇಲ್ಲವೋ ಎನ್ನುವುದನ್ನು ಅವರವರ ನಂಬಿಕೆಯ ಮೇಲೆ ಬಿಡಲಾಗುತ್ತಿದೆ. ವಿಧಿ ವಿಪರ್ಯಾಸ ಎಂದರೆ, ಸಾಯಿಬಾಬಾ ಅವರ ಸಾವು ಮತ್ತು ಕಾಯಿಲೆಯ ವಿಚಾರಗಳು ಒಂದು ರೀತಿಯ ನಿಗೂಢತೆ ಸೃಷ್ಟಿ ಮಾಡಿದೆ ಎನ್ನುವ ಮಾತುಗಳು ಇವತ್ತು ಕೇಳಿ ಬರುತ್ತಿದೆ. ಆ ರೀತಿ ಆಗಬಾರದಿತ್ತು ಎನ್ನುವುದು ನನ್ನ ಅನಿಸಿಕೆ. ಅವರ ಆರೋಗ್ಯ ಸ್ಥಿತಿಯನ್ನು ಬಹಳ ನಿಗೂಢವಾಗಿ ಇಡಲಾಗಿತ್ತು. ಬಹಳಷ್ಟು ಜನರು ಅವರ ಮೇಲೆ ತಮ್ಮ ನಂಬಿಕೆ ಹಾಗೂ ಪ್ರೀತಿಯನ್ನಿಟ್ಟುಕೊಂಡಿದ್ದಾರೆ. ಅವರಿಗೆಲ್ಲ ಅವರ ಸಾವಿನ ಬಗ್ಗೆ ಮತ್ತು ಅವರು ಅನಾರೋಗ್ಯಕ್ಕೆ ಒಳಗಾದ ಬಗ್ಗೆ ಸಾಕಷ್ಟು ಗೊಂದಲ ಹಾಗೂ ಅನುಮಾನಗಳಿವೆ. ಆದ್ಧರಿಂದ ಇದನ್ನೆಲ್ಲ ಹೋಗಲಾಡಿಸುವುದಕ್ಕೆ ಆಂಧ್ರಪ್ರದೇಶ ಸರ್ಕಾರ ಈ ಬಗ್ಗೆ ಒಂದು ತನಿಖೆಯನ್ನು ನಡೆಸಬೇಕಾಗಿತ್ತು. ಈಗ ಸತ್ಯ ಸಾಯಿ ಬಾಬಾ ಟ್ರಸ್ಟ್‌ನವರು, ಬಾಬಾರವರು ಬದುಕಿದ್ದಾಗ ಯಾವ ರೀತಿಯಲ್ಲಿ ಬಡವರ ಅಭಿವೃದ್ಧಿಗಾಗಿ ಕೆಲಸಗಳನ್ನು ಮತ್ತು ಸಹಾಯಗಳನ್ನು ಮಾಡಲಾಗುತ್ತಿತ್ತು ಅದನ್ನು ಮುಂದುವರೆಸಿಕೊಂಡು ಹೋಗುವುದಾಗಿ

ಹೇಳಿದ್ದಾರೆ. ಮುಂದೆ ಈ ಟ್ರಸ್ಟ್‌ನಲ್ಲಿ ಯಾವುದೇ ರೀತಿಯ ಗೊಂದಲಗಳು ಬಾರದಂತೆ ಟ್ರಸ್ಟ್‌ನ ನಿರ್ದೇಶಕರುಗಳಲ್ಲಿ ಯಾವುದೇ ರೀತಿಯ ಸ್ವಾರ್ಥ ಸೃಷ್ಟಿಯಾಗದೇ ಈಗಿರುವ ಹಾಗೆ ಯಥಾಪ್ರಕಾರ ಚಾರಿಟಿಯ ಕೆಲಸಕಾರ್ಯಗಳು ನಡೆಯಬೇಕೆನ್ನುವುದು ನಮ್ಮ ಆಶಯ. ಈ ಸಂದರ್ಭದಲ್ಲಿ ಜನರು ಯಾರನ್ನು ದೈವ ಮಾನವರೆಂದು ನಂಬಿದ್ದರು ಅಂತಹ ಒಬ್ಬ ದೊಡ್ಡ ವ್ಯಕ್ತಿಗೆ ಈ ಸದನದ ಮೂಲಕ ನಮ್ಮೆಲ್ಲರ ಪರವಾಗಿ ಶ್ರದ್ಧಾಂಜಲಿಯನ್ನು ಸಮರ್ಪಿಸಿ, ಇಂತಹ ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಭರಿಸತಕ್ಕ ಶಕ್ತಿಯನ್ನು ಭಗವಂತನು ಅವರ ಕುಟುಂಬದವರಿಗೆ ನೀಡಲೆಂದು ಪ್ರಾರ್ಥಿಸುತ್ತಾ, ದಿವಂಗತರುಗಳಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೆಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನ ಒಂದು ನಿಮಿಷ ಮೌನವನ್ನು ಆಚರಿಸಿತು.)

**ಸಭಾಪತಿಯವರು:–**ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

**ಸಭಾಪತಿಯವರು:–**ಈಗ ಮೃತರ ಗೌರವಾರ್ಥ ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗುವುದು.

(12 ಗಂಟೆ 55 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ 1 ಗಂಟೆ 17 ನಿಮಿಷಗಳಿಗೆ ಪ್ರಾರಂಭವಾಯಿತು ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದ್ದರು)

### 3. ಪ್ರಕಟಣೆ

**ಸಭಾಪತಿಯವರು:–**ಒಂದು ಪ್ರಕಟಣೆ ಇದೆ.

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ॥ ಶ್ರೀನಾಥ್‌ರವರು ದಿನಾಂಕ 30ನೇ ಮೇ, 2011 ರಿಂದ 25ನೇ ಜೂನ್, 2011ರವರೆಗೆ ಅಮೇರಿಕಾ ದೇಶಕ್ಕೆ ಪ್ರವಾಸ ಕೈಗೊಂಡಿರುವುದರಿಂದ ವಿಧಾನ ಪರಿಷತ್ತಿನ ಪ್ರಸ್ತುತ ಅಧಿವೇಶನದ ಉಪವೇಶನಗಳಿಗೆ ಹಾಜರಾಗಲು ಸಾಧ್ಯವಾಗದಿರುವ ಬಗ್ಗೆ ಸದನದ ಅನುಮತಿಯನ್ನು ಕೋರಿರುತ್ತಾರೆ.

ಸದರಿಯವರ ಗೈರು ಹಾಜರಿಗೆ ಸದನದ ಸಹಮತಿ ಇದೆಯೆಂದು ತಾವೆಲ್ಲರೂ ಒಪ್ಪಿದ್ದೀರಿ ಎಂದು ಭಾವಿಸುತ್ತೇನೆ.

### 4. ಅಭಿನಂದನೆ

**ಪ್ರೊ॥ ದೊರೆಸ್ವಾಮಿಯವರಿಗೆ ಗೌರವ ಡಾಕ್ಟರೇಟ್ ಪ್ರಧಾನ ಮಾಡಿರುವ ಕುರಿತು–**

**ಸಭಾಪತಿಯವರು:–**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು ಹಾಗೂ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿಯ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರು ಆಗಿರುವ ಪ್ರೊ॥ ಎಂ.ಆರ್. ದೊರೆಸ್ವಾಮಿ, ಇವರಿಗೆ ಮೈಸೂರು ವಿಶ್ವವಿದ್ಯಾಲಯವು ಶೈಕ್ಷಣಿಕ ರಂಗದಲ್ಲಿ ಸಲ್ಲಿಸಿರುವ ಅಸಾಮಾನ್ಯ ಸೇವೆಯನ್ನು ಪರಿಗಣಿಸಿ ಗೌರವ "ಡಾಕ್ಟರೇಟ್" ಪದವಿಯನ್ನು ಪ್ರದಾನ ಮಾಡಿರುವುದು ಸಂತೋಷದ ವಿಷಯವಾಗಿರುತ್ತದೆ. ಈ ಸಂದರ್ಭದಲ್ಲಿ ಡಾ॥ ಎಂ. ಆರ್. ದೊರೆಸ್ವಾಮಿಯವರಿಗೆ ಸದನವು ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸುತ್ತದೆ.

### 5. ಪ್ರಕಟಣೆಗಳು

**ಸಭಾಪತಿಯವರು:–**ಈಗ ಎರಡು ಪ್ರಕಟಣೆಗಳು ಇವೆ.

(i) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ

ನಿಯಮ 9ರ ಮೇರೆಗೆ ಕೆಳಕಂಡ ಸದಸ್ಯರುಗಳನ್ನು ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವಂತೆ ನಾಮನಿರ್ದೇಶನ ಮಾಡಲಾಗಿದೆ.

1) ಶ್ರೀ ಬಸವರಾಜ ಹೊರಟ್ಟಿ
2) ಶ್ರೀ ಎನ್. ತಿಪ್ಪಣ್ಣ
3) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ
4) ಶ್ರೀ ಡಿ.ಎಸ್. ವೀರಯ್ಯ

(ii) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ

ನಿಯಮ 222ರ ಮೇರೆಗೆ ಕರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಕೆಳಕಂಡಂತೆ ಮುಂದುವರೆಸಲಾಗಿದೆ.

1) ಶ್ರೀಮತಿ ವಿಮಲಾಗೌಡ (ಉಪಸಭಾಪತಿಯವರು)
2) ಡಾ॥ ವಿ. ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ ಸಚಿವರು ಮತ್ತು ಸಭಾನಾಯಕರು)
3) ಶ್ರೀಮತಿ ಮೋಟಮ್ಮ (ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು)
4) ಡಾ॥ ಎ.ಎಚ್. ಶಿವಯೋಗಿಸ್ವಾಮಿ (ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರು)
5) ಶ್ರೀ ಆರ್. ವಿ. ವೆಂಕಟೇಶ್ (ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರು)
6) ಶ್ರೀ ವಿ.ಆರ್. ಸುದರ್ಶನ್ (ವಿಧಾನ ಪರಿಷತ್ತಿನ ಸದಸ್ಯರು)
7) ಶ್ರೀ ಯಂ. ಸಿ. ನಾಣಯ್ಯ (ವಿಧಾನ ಪರಿಷತ್ತಿನ ಸದಸ್ಯರು)
8) ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನ ಪರಿಷತ್ತಿನ ಸದಸ್ಯರು)

**ಆಹ್ವಾನಿತರು**

9) ಶ್ರೀ ಬಿ.ಎಸ್. ಯಡಿಯೂರಪ್ಪನವರು (ಮುಖ್ಯ ಮಂತ್ರಿಗಳು)
10) ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ, ನಗರಾಭಿವೃದ್ಧಿ ಸಚಿವರು)
11) ಶ್ರೀ ಬಸವರಾಜ ಹೊರಟ್ಟಿ (ವಿಧಾನ ಪರಿಷತ್ತಿನ ಸದಸ್ಯರು)
12) ಶ್ರೀ ಮನೋಹರ ಮಸ್ಕಿ (ವಿಧಾನ ಪರಿಷತ್ತಿನ ಸದಸ್ಯರು)

## 6. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:**–ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

| **ಕ್ರ.ಸಂ.** | **ವಿಧೇಯಕದ ಹೆಸರು** | **ಒಪ್ಪಿಗೆಯನ್ನು ಪಡೆದ ದಿನಾಂಕ** | **ಒಪ್ಪಿಗೆಯನ್ನು ನೀಡಿದವರು** |
|---|---|---|---|
| 01 | ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಶೇಷ ಉಪಬಂಧಗಳು) ವಿಧೇಯಕ, 2011 | 02.04.2011 | ರಾಜ್ಯಪಾಲರು |
| 02 | ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2011 | 02.04.2011 | ರಾಜ್ಯಪಾಲರು |

# ವಿಧಾನಸಭೆಯ ವಿಧೇಯಕಗಳು

| ಕ್ರ.ಸಂ. | ವಿಧೇಯಕದ ಹೆಸರು | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| **01** | ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2011 | 17.03.2011 | ರಾಜ್ಯಪಾಲರು |
| **02** | ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2011 | 17.03.2011 | ರಾಜ್ಯಪಾಲರು |
| **03** | ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2011 | 17.03.2011 | ರಾಜ್ಯಪಾಲರು |
| **04** | ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕ, 2011 | 17.03.2011 | ರಾಜ್ಯಪಾಲರು |
| **05** | ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2011 | 18.03.2011 | ರಾಜ್ಯಪಾಲರು |
| **06** | ಕರ್ನಾಟಕ ಪೌರ ನಿಗಮಗಳ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2011 | 02.04.2011 | ರಾಜ್ಯಪಾಲರು |

| | | | |
|---|---|---|---|
| **07** | ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2011 | 02.04.2011 | ರಾಜ್ಯಪಾಲರು |
| **08** | ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2010 | 04.02.2011 | ರಾಜ್ಯಪಾಲರು |
| **09** | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2011 | 04.02.2011 | ರಾಜ್ಯಪಾಲರು |
| **10** | ಕರ್ನಾಟಕ ಗೃಹ ರಕ್ಷಕ ದಳ (ತಿದ್ದುಪಡಿ) ವಿಧೇಯಕ, 2011 | 02.04.2011 | ರಾಜ್ಯಪಾಲರು |
| **11** | ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2011 | 02.04.2011 | ರಾಜ್ಯಪಾಲರು |
| **12** | ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸ್‌ಗಳ ನೌಕರರನ್ನು ವಿಲೀನಗೊಳಿಸುವ ವಿಧೇಯಕ, 2011 | 02.04.2011 | ರಾಜ್ಯಪಾಲರು |

**ಸಭಾಪತಿಯವರು:**–ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಅದರ ಬಗ್ಗೆ ಅವರು ಪ್ರಾಸಂಗಿಕವಾಗಿ ಪೂರ್ವಾಭಾವಿ ಪ್ರಸ್ತಾವವನ್ನು ಮಾಡಬೇಕು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):**–ಸನ್ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅನುಮತಿಯನ್ನು ನೀಡಿರುವುದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನಮ್ಮ ಪಕ್ಷದ ರಾಜ್ಯ ಮಟ್ಟದ ನಾಯಕರುಗಳ ಸಭೆ ನಡೆಯುತ್ತಿದೆ. ಆ ಸಭೆಯಲ್ಲಿ ನಾವುಗಳು ಭಾಗವಹಿಸಲೇಬೇಕಾಗಿದೆ. ಅನಿರೀಕ್ಷಿತವಾಗಿ ವಿಧಾನ ಪರಿಷತ್ತು ಸಮಾವೇಶಗೊಂಡಿರುವುದರಿಂದ ಸ್ವಲ್ಪ ಅನಾನುಕೂಲವಾಗಿದೆ. ಮಹಾನ್ ನಾಯಕರುಗಳ ನಿಧನದ ಸಂತಾಪಸೂಚನಾ ನಿರ್ಣಯವನ್ನು ಸದನದಲ್ಲಿ ಮಂಡಿಸಿದ್ದೇವೆ. ಅವರ ಗೌರವಾರ್ಥವಾಗಿ ಈ ದಿನ ಸದನವನ್ನು ಅರ್ಧ ದಿನದ ಮಟಿಗೆ ಮುಂದೂಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದನ್ನು ಮಾನ್ಯ ಸಭಾ ನಾಯಕರು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):**– ಸನ್ಮಾನ್ಯ ಸಭಾಪತಿಯವರೇ, ಮಹಾನ್ ನಾಯಕರುಗಳು ನಮ್ಮನ್ನು ಅಗಲಿದ್ದಾರೆ. ಸಾರ್ವಜನಿಕ ಬದುಕಿನಲ್ಲಿ ನಾಡುನುಡಿಗೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆಗಳನ್ನು ನೀಡಿ ಮಿಂಚಿ ಮಾಯವಾದ ಶ್ರೇಷ್ಠ ರಾಜಕೀಯ ವ್ಯಕ್ತಿಗಳು ಸಂಗೀತ ಲೋಕದ ದಿಗ್ಗಜರು ಹಾಗೂ ಆಧ್ಯಾತ್ಮಿಕ ಲೋಕದಲ್ಲಿ ತಮ್ಮದೇ ಆಗಿರುವಂತಹ ರೀತಿಯಲ್ಲಿ ಮಹಾನ್ ಸಾಧನೆ ಮಾಡಿರುವಂತಹ ಶ್ರೇಷ್ಠ ಮಹಾನ್ ಮಾನವತಾವಾದಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಈ ಎಲ್ಲ ಮೃತರ ಗೌರವಾರ್ಥವಾಗಿ ಸದನವನ್ನು ಮುಂದೂಡಿದರೆ ಉತ್ತಮ ಎನ್ನುವುದು ನಮ್ಮ ಭಾವನೆಯಾಗಿದೆ. ಇದರ ಜೊತೆಗೆ ಕಾಂಗ್ರೆಸ್ ಪಕ್ಷದ ಅತ್ಯಂತ ಮಹತ್ವವಾದ ಕಾರ್ಯಾಗಾರ ನಡೆಯುತ್ತಿರುವ ಕಾರಣದಿಂದ ದಯಮಾಡಿ

ಅರ್ಧ ದಿನಗಳ ಕಾಲ ಈ ಸದನವನ್ನು ಮುಂದೂಡಬೇಕೆನ್ನುವ ನಮ್ಮ ವಿರೋಧ ಪಕ್ಷದ ನಾಯಕರ ಮಾತಿಗೆ ನಾನೂ ಸಹ ಧ್ವನಿಗೂಡಿಸುತ್ತಿದ್ದೇನೆ. ಅದನ್ನು ತಾವು ಪರಿಗಣಿಸುತ್ತೀರಿ ಎಂದು ಆಶಿಸುತ್ತೇನೆ.

**ಸಭಾಪತಿಯವರು:**–ಗಣ್ಯ ವ್ಯಕ್ತಿಗಳು ಮತ್ತು ದೇವ ಮಾನವರಾದ ಸತ್ಯ ಸಾಯಿಬಾಬರವರು ನಿಧನರಾಗಿದ್ದಾರೆ. ಅವರುಗಳನ್ನು ಈ ದಿನ ಸ್ಮರಿಸಿಕೊಳ್ಳುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಸದನವನ್ನು ನಡೆಸುವುದು ಸರಿ ಕಾಣುವುದಿಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ಜೊತೆಗೆ ಮಾತನಾಡಿದ್ದಾರೆ. ಈ ಬಗ್ಗೆ ಸದನ ಮತ್ತು ಸಭಾ ನಾಯಕರು ಒಪ್ಪಿಗೆಯನ್ನು ಕೊಡುವುದಾದರೆ ನನ್ನ ಅಭ್ಯಂತರವೇನು ಇಲ್ಲ. ಮಾನ್ಯ ಸಭಾನಾಯಕರು ಏನು ಹೇಳುತ್ತಾರೆ ಎನ್ನುವುದರ ಆಧಾರದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

**ಡಾ|| ವಿ. ಎಸ್. ಆಚಾರ್ಯ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋದ ಪಕ್ಷದ ನಾಯಕರು ಮತ್ತು ಉಪ ನಾಯಕರು ಪ್ರಸ್ತಾಪ ಮಾಡಿರುವಂತಹ ವಿಷಯವನ್ನು ತಮ್ಮ ವಿವೇಚನೆಗೆ ಬಿಡುತ್ತೇವೆ. ಸದನವನ್ನು ನಡೆಸಬೇಕೆಂದರೆ ಅದಕ್ಕೂ ಸರ್ಕಾರ ಸಿದ್ಧವಿದೆ. ಸೂಕ್ತ ನೋಟೀಸ್ ಕೊಟ್ಟೇ ನಾವು ಸದನವನ್ನು ಕರೆದಿದ್ದೇವೆ. ಅನಿರೀಕ್ಷತವಾಗಿ ಸದನವನ್ನು ಕರೆದಿಲ್ಲ. ಇವತ್ತು ಕಾಗ್ರೆಸ್ ಪಕ್ಷದ ಮಹತ್ವದ ಸಭೆ ನಡೆಯುತ್ತಿದೆ ಮತ್ತು ಮಹಾನ್ ವ್ಯಕ್ತಿಗಳು ನಿಧನಗೊಂಡಿರುವ ಹಿನ್ನಲೆಯಲ್ಲಿ ಅವರುಗಳ ನಿಧನದ ಸಂತಾಪ ಸೂಚನೆಯನ್ನು ಈ ಸದನದಲ್ಲಿ ಮಂಡಿಸಿರುವ ಕಾರಣದಿಂದಾಗಿ ಸದನವನ್ನು ಮುಂದೂಡಬೇಕೆನ್ನುವ ವಿರೋಧ ಪಕ್ಷದ ನಾಯಕರ ಮನವಿಯನ್ನು ನಾವು ಒಪ್ಪುತ್ತಿದ್ದೇವೆ.

**ಸಭಾಪತಿಯವರು:**–ಮಾನ್ಯ ವಿರೋಧ ಪಕ್ಷದ ನಾಯಕರು, ಉಪ ನಾಯಕರು ಮತ್ತು ಮಾನ್ಯ ಸಭಾ ನಾಯಕರ ಅಭಿಪ್ರಾಯಗಳು ಒಂದೇ ರೀತಿಯಲ್ಲಿ ಇರುವುದರಿಂದ ಗಣ್ಯ ವ್ಯಕ್ತಿಗಳ ನಿದನದ ಹಿನ್ನಲೆಯಲ್ಲಿ ಅದರಲ್ಲೂ

ಮುಖ್ಯವಾಗಿ ದೇವ ಮಾನವ ಸತ್ಯ ಸಾಯಿ ಬಾಬರವರ ನೆನಪಿನ ಹಿನ್ನೆಲೆಯಲ್ಲಿ ಇವತ್ತಿನ ಸಭೆಯನ್ನು ನಾಳೆ ಬೆಳಿಗ್ಗೆ 10.30ರವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 1 ಗಂಟೆ 24 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ: 03ನೇ ಜೂನ್ ಮಾಹೆ 2011ರ ಶುಕ್ರವಾರದಂದು ಬೆಳಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು.)**